CC-O. In Public Domain. Digitized by eGangotri

ಶ್ರೀಃ

ಶಬರಿಮಲೈ ಅಯ್ಯಪ್ಪನ ಚರಿತ್ರೆ

ಅಥವಾ

ಅಗಸ್ತ್ಯಗೀತಾ

ವಿದ್ವಾನ್ ಬಾಲಗಣಪತಿಭಟ್ಟ

———

ಶ್ರೀ ಶಂಕರಕೃಪಾ ಪ್ರಕಾಶನ
ಮೈಸೂರು-೪

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಃ

ಶ್ರೀ ಶಬರಿಮಲೈ ಅಯ್ಯಪ್ಪನ್ ಚರಿತ್ರೆ

ಅಥವಾ

ಅಗಸ್ತ್ಯಗೀತಾ

ವಿದ್ವಾನ್ ಬಾಲಗಣಪತಿಭಟ್ಟ

ಶ್ರೀ ಶಂಕರಕೃಪಾ ಪ್ರಕಾಶನ
ಮೈಸೂರು-೪

Sri Vidyabharathi Book Centre, Sringeri

SRI AYYAPPA CHARITRE

CC-O. In Public Domain. Digitized by eGangotri

By : Vidwan B. Balaganapathi Bhatta

I Edition : 1975

Price : 0-50

0-50

Published by :
Sri Shankara Krupa Prakashana
Mysore-4

S. S. M. P. (P.) LTD. MYSORE - 4.

Sri Vidyabharathi Book Centre, Sringeri

CC-O. In Public Domain. Digitized by eGangotri

ಶರಣಂ ಅಯ್ಯಪ್ಪ

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥

ಇದು ಭಗವಂತನು ಧರ್ಮಾತ್ಮರಾದ ಜನರಿಗೆ ಕೊಟ್ಟ ಅಭಯ ವಾಣಿ. ಧರ್ಮಕ್ಕೆ ಧಕ್ಕೆಯುಂಟಾಗಿ ಅಧರ್ಮದ ಬುನಾದಿಯು ರೂಢಮೂಲವಾದಾಗ, ಧರ್ಮಪ್ರಿಯನಾದ ಭಗವಂತನು ಅವತಾರವೆತ್ತಿ ಅಧರ್ಮವನ್ನು ದೂರೀಕರಿಸಿ, ಧರ್ಮವನ್ನು ರೂಢಮೂಲವನ್ನಾಗಿಸುವನು. ಈ ಒಂದು ಮಹತ್ತಾದ ಕಾರ್ಯಕ್ಕಾಗಿ ಭಗವಂತನು ಧರಿಸುವ ರೂಪ ನಾನಾ ಬಗೆಯದು. ಇದಕ್ಕಾಗಿಯೇ ಭಗವಂತ ಮೀನಿನ ರೂಪವನ್ನು ತಾಳಿದ, ಆನೆಯಾದ, ವರಾಹನಾದ. ಆದುದರಿಂದಲೇ "ಕೋಜಾನಾತಿ ಜನೋ ಜನಾರ್ದನ ಮನೋವೃತ್ತಿಃ ಕದಾ ಕೀದೃಶೀ" ಎಂದಿದ್ದಾನೆ ಸುಭಾಷಿತಕಾರ. ಅದೇ ಪರಮಾತ್ಮನಿಂದ ಅಥವಾ ಆ ಚಿದ್‌ವಸ್ತುವಿನಿಂದ ಸ್ತ್ರೀರೂಪದಲ್ಲಿಯೂ ಧರ್ಮಕಾರ್ಯಾಂತಿಯನ್ನು ಅಧರ್ಮದ ನಾಶದಿಂದ ಮಾಡಲಾಗಿದೆ ಎಂಬುದಕ್ಕೆ ದೇವಿಯ ನಾನಾ ಅವತಾರಗಳೇ ಸಾಕ್ಷಿ. "ಅಕ್ಷಸ್ರಕ್ಪರಶುಂ ಗದೇಶು ಕುಲಿಶಂ ಪದ್ಮಂ ಧನುಃ ಕುಂಡಿಕಾಂ ದಂಡಂ ಶಕ್ತಿಮಸಿಂಚ ಚರ್ಮ ಜಲಜಂ ಘಂಟಾಂ ಸುರಾಭಾಜನಂ । ಶೂಲಂ ಪಾಶಸುದರ್ಶನೇ ಚ ದಧತೀಂ ಹಸ್ತೈಃ ಪ್ರಸನ್ನಾನನಾಂ ಸೇವೇ ಸೈರಿಭಮರ್ದಿನೀಮಿಹ ಮಹಾಲಕ್ಷ್ಮೀಂ ಸರೋಜ ಸ್ಥಿತಾಂ" ಅಷ್ಟಾದಶ ಭುಜಗಳನ್ನು ಪಡೆದು ಅವತರಿಸಿದ ದೇವಿಯು ಈ ಪ್ರಾರ್ಥನಾ ಪದ್ಯಡಲ್ಲಿ ಚಿತ್ರಿಸಲ್ಪಟ್ಟಿಸಿದ್ದಾಳೆ. ಮಹಿಷಾಸುರನೆಂಬ ಮಹಾ ರಾಕ್ಷಸನು ತನ್ನ ಶಕ್ತಿವಿಶೇಷದಿಂದ ಮೆರೆಯುತ್ತಾ ಪ್ರಪಂಚವೆಲ್ಲವನ್ನೂ ತನ್ನ ಉಪಟಳಗಳಿಂದ ಅಲ್ಲೋಲ ಕಲ್ಲೋಲ ಮಾಡಿ ಧರ್ಮಕಾರ್ಯಗಳಿಗೆ ಕುಠಾರಪ್ರಾಯನಾದನು. ಅಂತಹ ರಾಕ್ಷಸನ ಸಂಹಾರಕ್ಕಾಗಿಯೇ ದೇವಿಯ ಈ ದಿವ್ಯರೂಪವು ಸೃಷ್ಟವಾಯಿತು. ಈ ಮಹಿಷಾಸುರ ಮರ್ಧಿನಿಯ ಸಂಪೂರ್ಣ ಚರಿತ್ರೆಯು "ಶ್ರೀ ದೇವೀಭಾಗವತ, ಮಾರ್ಕಂಡೇಯ ಪುರಾಣ" ಇತ್ಯಾದಿಗಳಿಂದ ಜನವಿದಿತವಾಗಿದೆಯಷ್ಟೆ. ರಂಭ ಕರಂಭರು ದೈತ್ಯಸಹೋದರರು. ರಂಭನ ಮಗ ಮಹಿಷ, ಕರಂಭಾಸುರನ ಮಗಳು ಮಹಿಷಿ, ಈ ಮಹಿಷಾಸುರನ ಮಹಿಷೀ ಇವರ ಸಹೋದರರು. ಅವಳ ಅಕಾರವೂ ಅಣ್ಣನಂತೆಯೇ. ಅಣ್ಣ ಕೋಣ, ತಂಗಿ ಎನ್ನೆ. ಆದುದರಿಂದಲೇ ಅವಳ ಹೆಸರು ಮಹಿಷಿಯೆಂದು. ಆ ಮಹಿಷಿಯು ಎಲ್ಲ ರಾಕ್ಷಸರಂತೆ ಬ್ರಹ್ಮನನ್ನು ಕುರಿತು ಘೋರವಾದ ತಪಸ್ಸನ್ನು ಆಚರಿಸಿದಳು. ತಪಸ್ಸಿಗೆ ಒಲಿದ ಬ್ರಹ್ಮ ಅವಳ ಇಷ್ಟಾರ್ಥವೇನೆಂದು ಕೇಳಿದಾಗ "ತನಗೆ ಸಾವೇ ಬರಬಾರದೆಂದು" ಪ್ರಾರ್ಥಿಸಿಕೊಂಡಳು. ಕಾಲಕ್ರಮದಲ್ಲಿ ತನಗೂ ಅಳಿವು ಉಂಟಾಗುವ ಬ್ರಹ್ಮ ಆ ರಾಕ್ಷಸಿಯ ಇಷ್ಟಾರ್ಥವನ್ನು ಹೇಗೆ ತಾನೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಈಡೇರಿಸಿಯಾನು ? ಹೀಗಾಗಿ, ತನ್ನ ಅಸಾಧ್ಯತೆಯನ್ನು ವಿವರಿಸಿದಾಗ ಆ ಮಹಿಷಿಯು ಇನ್ನೊಂದು ವರವನ್ನು ಬೇಡಿದಳು. "ಹರಿಹರರಿಗೆ ಪುತ್ರನಾಗಿ ಹನ್ನೆರಡು ವರ್ಷಗಳ ಕಾಲ ಮಾನವನ ರಕ್ಷಣೆಗೆ ಒಳಪಟ್ಟ ವ್ಯಕ್ತಿಯೊಬ್ಬನಿಂದ ತನಗೆ ಮರಣವು ಬರುವುದಾದರೆ ಬರಲಿ" ಎಂದು. ಇಬ್ಬರು ಪುರುಷರಿಗೆ ಮಕ್ಕಳು ಸತಿಪತಿಭಾವದಿಂದ ಹುಟ್ಟುವುದು ಅಸಾಧ್ಯವೆಂದೂ, ಒಂದು ವೇಳೆ ಆ ರೀತಿ ದೈವೀಶಕ್ತಿಯಿಂದ ಉಂಟಾದರೂ ಅದು ಭೂಲೋಕದಲ್ಲಿ ಬಾಳಲಾರದು ಎಂಬುದೂ ಅವಳ ಮನಸ್ಸಿನ ಅಭಿಪ್ರಾಯ. ಚತುರ್ಮುಖನು ಈ ಮಾತಿಗೆ ಒಪ್ಪಿ "ಅಸ್ತು" ಎಂದನು.

ಈ ವರಪ್ರಭಾವದಿಂದ ತನಗೆ ಸಾವೇ ಇಲ್ಲವೆಂದು ವೃಥವಾಗಿ ನಿಶ್ಚಯಿಸಿಕೊಂಡ ಮಹಿಷೀ ರಾಕ್ಷಸಿಯು ತನ್ನ ಕುಲದ ಸ್ವಭಾವದಂತೆ ಮೂರು ಲೋಕವನ್ನೂ ಹಿಂಸಿಸಲು ಆರಂಭಿಸಿದಳು. ಇವಳ ಕಾಟವನ್ನು ತಡೆಯಲಾರದ ದೇವತೆಗಳು ಶ್ರೀ ವಿಷ್ಣುವಿಗೆ ಮೊರೆಯಿಟ್ಟರು. ದೈತ್ಯಾಂತಕನಾದ ವಿಷ್ಣುವು ಈಗಾಗಲೇ ದೇವಲೋಕದಲ್ಲಿ ತನ್ನ ಆಡಳಿತನನ್ನು ನಡೆಯಿಸುತ್ತಿದ್ದ ರಕ್ಕಸಿಯ ಬಳಿಗೆ ಮೋಹಕವಾದ ಸುಂದರ ರೂಪವನ್ನು ಹೊತ್ತು ಅವಳು ಕಾಮಿಸುವಂತೆ ಮಾಡಿ, ಘೋರವಾದ ಅರಣ್ಯ ಒಂದಕ್ಕೆ ಕರೆದು ಕೊಂಡುಹೋಗಿ ಬಿಟ್ಟು ಮಾಯವಾದನು. ಆತನಿಗಾಗಿ ಅರಣ್ಯದಲ್ಲಿ ಪೈಮರೆತು ಹುಡುಕಾಡುತ್ತಾ ಆ ಮಹಿಷಿ ರಕ್ಕಸಿ ಕಾಲಕಳೆಯ ಲಾರಂಭಿಸಿದಳು.

ಇದೇ ಸಮಯದಲ್ಲಿ ಭಸ್ಮಾಸುರನೆಂಬ ದೈತ್ಯನು ತನ್ನ ಕುಲಗುರುವೂ ಶಿಷ್ಯ ಪ್ರಿಯನೂ ಆದ ಶುಕ್ರಾಚಾರ್ಯನ ಸಲಹೆಯಂತೆ ಪಂಪಾನದಿಯ ಪರಿಸರದ ಘೋರಾರಣ್ಯದಲ್ಲಿ ಆಶುತೋಷನಾದ ಶಿವನನ್ನು ಕುರಿತು ತಪಸ್ಸುಮಾಡಿದನು. ಇವನ ತಪೋಜ್ವಾಲೆಯಿಂದ ಪ್ರಪಂಚವೇ ಸುಡುತ್ತಿರುವಾಗ ಭಕ್ತಪ್ರಿಯನಾದ ಶಂಕರನು, ಅವನ ಮುಂದೆ ಬಂದು ನಿಂತನು. "ಎಲೈ ದೈತ್ಯೇಂದ್ರನೇ ! ನಿನ್ನ ಈ ಪಂಚಾಗ್ನಿಮಧ್ಯದ ಘೋರವಾದ ತಪಸ್ಸಿಗೆ ನಾನು ಮೆಚ್ಚಿದ್ದೇನೆ. ನಿನ್ನ ಇಷ್ಟಾರ್ಥವೇನು ?" ಎಂದು ಪ್ರೀತಿಯಿಂದ ಕೇಳಿದನು. ಗಿರಿಜಾಪತಿಯನ್ನು ಕಣ್ಣಾರೆ ಕಂಡು ಅತಿ ಸಂತುಷ್ಟನಾಗಿ, ಹಿಂದೆ ಶುಕ್ರಾಚಾರ್ಯರು ತನಗೆ ಕೊಟ್ಟ ಸಲಹೆಯಂತೆ ತನ್ನ ಕೈಗೆ ಪ್ರಪಂಚವನ್ನು ಸುಡುವ ಶಕ್ತಿಯನ್ನು ಒದಗಿಸಬೇಕೆಂದು ಪ್ರಾರ್ಥಿಸಿದನು. ಶಿವನು ಸಂತೋಷದಿಂದ ಅದಕ್ಕೆ ಒಪ್ಪಿಗೆಯಿತ್ತನು. ಈ ಮಹಾಶಕ್ತಿಯನ್ನು ಸಂಪಾದಿಸಿದ ದೈತ್ಯಾಧಿಪತಿಯಾದ ಭಸ್ಮಾಸುರನಿಗೆ ಒಡನೆಯೇ ಪರೀಕ್ಷಿಸಬೇಕೆಂಬ ಹಂಬಲವುಂಟಾಯಿತು. ಪ್ರತ್ಯಕ್ಷನಾಗಿದ್ದ ಶಿವನ ತಲೆಯ ಮೇಲೆ ತನ್ನ ಕೈಯನ್ನು ಇಡಲು ಹವಣಿಸಿದನು. ಇದನ್ನು ತಪ್ಪಿಸಿಕೊಳ್ಳಲು ಶಂಭುವು ಓಡಿದನು. ಹೀಗೆ ಹಲವಾರು ದಿನಗಳು ಶಿವನನ್ನು ಬೆನ್ನಟ್ಟುತ್ತಾ ಕಳೆದವು. ಹೇಗಾದರೂ ಈ ಕಾಟವನ್ನು ತಪ್ಪಿಸಿಕೊಳ್ಳಬೇಕೆಂದು ಭಾವಿಸಿ ಶಿವನು ಪಕ್ಕದಲ್ಲಿದ್ದ ಆಪರಿಕೆಯ ಗಿಡದ ಬೀಜವೊಂದರಲ್ಲಿ ಸೂಕ್ಷ್ಮರೂಪಿಯಾಗಿ ಪ್ರವೇಶಿಸಿದನು.

CC-O. In Public Domain. Digitized by eGangotri

ಇತ್ತ ಕೈಲಾಸದಲ್ಲಿ ಗಿರಿಜೆಗೆ ಭಯವುಂಟಾಯಿತು. ತಾನು ಬೇಡನೆಂದು ತಡೆದರೂ ತನ್ನ ಮಾತನ್ನು ಕೇಳದೆ ಭಸ್ಮಾಸುರನ ತಪಸ್ಸಿಗೆ ಮೆಚ್ಚಿ ವರವನ್ನು ಕೊಡಲು ಭೂಲೋಕಕ್ಕೆ ಹೋದ ಪತಿಯು ಇನ್ನೂ ಬಂದಿಲ್ಲವೆಂದು ಅವಳ ಮನಸ್ಸು ಪರಿತಪಿಸ ಹತ್ತಿತು ತನ್ನ ದೂತರಾದ ಪ್ರಮಥಗಣಗಳನ್ನು ಕರೆದು ಹುಡುಕಿಕೊಂಡು ಬರುವಂತೆ ಅಪ್ಪಣೆಯಿತ್ತಳು. ಅವರು ಭೂಮಂಡಲವೆಲ್ಲವನ್ನೂ ಸುತ್ತಿ, ಎಲ್ಲಿಯೂ ಶಿವನನ್ನು ಕಾಣದೆ ಹಿಂತಿರುಗಿ ಬಂದು ವರದಿಯನ್ನೊಪ್ಪಿಸಿದರು. ಆಗ ಜಗದ್ರಕ್ಷಕನಾದ ಶ್ರೀಮನ್ ನಾರಾಯಣನೇ ತನಗೂ ರಕ್ಷಕನೆಂದು ಭಾವಿಸಿ ವೈಕುಂಠದಲ್ಲಿ ತನ್ನ ಕಷ್ಟವನ್ನು ಆತನಿಗೆ ನಿವೇದಿಸಿಕೊಂಡಳು. ಅವಳಿಗೆ ಸಮಾಧಾನವನ್ನು ಹೇಳಿ ಶ್ರೀಮನ್ನಾರಾಯಣನು ಗರುಡನನ್ನು ಏರಿ, ಭಸ್ಮಾಸುರನಿದ್ದ ಸ್ಥಳಕ್ಕೆ ಹಿಂದೆ ಅಮೃತವನ್ನು ಹಂಚುವ ಸಮಯದಲ್ಲಿ ತಾಳಿದ, ಮೋಹಿನಿಯ ರೂಪದಿಂದಿಳಿದನು.

ವಿಶ್ವಮೋಹಕವಾದ ಹೆಣ್ಣಿನ ರೂಪವನ್ನು ಕಂಡ ಭಸ್ಮಾಸುರನ ಮನಸ್ಸು ತಲ್ಲಣಿಸಿತು. ಅವಳ ಪಕ್ಕದಲ್ಲಿ ನಿಂತು "ನೀನ್ಯಾರು ? ನಿನ್ನ ಕುಲವೇನು ? ನೀನೆಲ್ಲಿಂದ ಬಂದೆ ?" ಎಂದು ಪ್ರಶ್ನಿಸಿದನು. ನಾನು ಸತ್ಕುಲಪ್ರಸೂತೆ ಎಂದೂ, ಇನ್ನೂ ತಾನು ವಿವಾಹವಾಗದ ಕನ್ಯೆಯೆಂದೂ ಆ ಮೋಹಿನಿ ತಿಳಿಸಿದಳು. ತನ್ನ ಇಷ್ಟಾರ್ಥವು ನೆರವೇರುವುದೆಂದು ಸಂತಸದಿಂದ ಉಬ್ಬುತ್ತಿದ್ದ ರಾಕ್ಷಸನನ್ನು ಕುರಿತು, ಮುಂದುವರೆದು ಅವಳು "ಅಯ್ಯಾ ! ಈಗ ಹಲವಾರು ದಿವಸಗಳ ಘೋರವಾದ ತಪಸ್ಸಿನ ಮಧ್ಯದಲ್ಲಿ ನೀನು ನಿನ್ನ ನಿತ್ಯಕರ್ಮಗಳ ಅನುಷ್ಠಾನವನ್ನು ದೂರಮಾಡಿದ್ದಿ. ನನಗೆ ಇದು ಬಹಳ ಅಹಿತ. ಇಂತಹವನನ್ನು ನಾನು ಮದುವೆ ಆಗಲಾರೆ. ಆದುದರಿಂದ ನೀನು ಇಂದಿನ ನಿತ್ಯಕರ್ಮಗಳಾದ ಸಂಧ್ಯಾವಂದನಾದಿಗಳನ್ನು ಮುಗಿಸಿ ಪರಿಶುದ್ಧನಾಗಿ ನನ್ನ ಬಳಿಗೆ ಬಾ. ಆಗ ನಾನು ನಿನ್ನನ್ನು ಖಂಡಿತವಾಗಿಯೂ ಮದುವೆ ಆಗುವೆ" ಎಂದಳು.

ಒಡನೆಯೇ ಪಕ್ಕದ ಪಂಪಾನದಿಯಲ್ಲಿ ಸ್ನಾನಮಾಡಿ, ಶುಚಿರ್ಭೂತನಾಗಿ ನಿತ್ಯ ಕರ್ಮದ ಅನುಷ್ಠಾನಕ್ಕೆ ಕುಳಿತನು. ಮಾಯೆಯ ಬಲದಿಂದಲೂ, ಕಾಮದ ಅತಿಶಯ ದಿಂದಲೂ ತನ್ನನ್ನು ತಾನು ಮರೆತ ಆ ಭಸ್ಮನು " ಪ್ರಣವಸ್ಯ ಪರಬ್ರಹ್ಮಾಋಷಿಃ " ಎಂದು ತನ್ನ ತಲೆಯ ಮೇಲೆ ಕೈಯಿಟ್ಟನು. ಒಡನೆಯೇ ಭಸ್ಮವಾದನು.

ರಾಕ್ಷಸನ ಸಂಹಾರವನ್ನು ಉಪಾಯದಿಂದ ಮಾಡಿದ ಮೋಹಿನಿ ಶಿವನನ್ನು ಹೆಸರಿಡಿದು ಕೂಗಿದಳು. ಆಸುರನ ಭಯದಿಂದ ಅಡಗಿದ್ದ ಶಿವ ಹೊರಕ್ಕೆ ಬರಲೇ ಇಲ್ಲ. ಮೂಲಮಂತ್ರದ ಉಪಾಸನೆಯ ಮೂಲಕ ಪುನಃ ಶಿವನನ್ನು ಮೋಹಿನಿಯ ರೂಪದ ಶ್ರೀ ವಿಷ್ಣುವು ಆಹ್ವಾನಿಸಿದನು. ಒಡನೆಯೇ ಶಿವನು ಪ್ರತ್ಯಕ್ಷನಾಗಿ ಎದುರಿಗೆ ಬಂದನು. ಅಲ್ಲಿಯೇ ಕಂಡ ಮೋಹಿನಿಯ ದಿವ್ಯರೂಪಕ್ಕೆ ಮರುಳಾದನು.

CC-O. In Public Domain. Digitized by eGangotri

ಲೋಕಕಲ್ಯಾಣಕಾರಿಗಳಾದ ಈ ಉಭಯ ದೇವತೆಗಳಾದ ಹರಿ-ಹರರ, ರಜಸ್ಸು, ತೇತಸ್ಸುಗಳು, ಪರಸ್ಪರವಾಗಿ ಕಲೆತು ಒಡನೆಯೇ ಅಲ್ಲಿ ಒಂದು ದಿವ್ಯರೂಪವು ಉದಯಿಸಿತು.

ನೀಲಮೇಘಶ್ಯಾಮ, ಅಪಾರ ತೇಜಸ್ವಿ, ಕಿರೀಟಹಾರ ಕವಚಕುಂಡಲ ಭೂಷಣೋಪೇತ, ಶಂಖ, ಚಕ್ರ, ಶೂಲ, ಪಾಶಾದ್ಯಾಯನುಮಂಡಿತ, ಉಭಯನರವ, ಕೋಟಿಸೂರ್ಯ ಪ್ರಕಾಶ, ಈ ದಿವ್ಯವಿಗ್ರಹ ಲೋಕಕ್ಕೆಲ್ಲಾ ಆಚ್ಚರಿಯನ್ನುಂಟುಮಾಡುವಂತಾಯಿತು ದೇವತೆಗಳು ಪುಷ್ಪವೃಷ್ಟಿ ಮಾಡಿದರು. ದೇವದುಂದುಭಿಗಳು ಮೊಳಗಿದವು, ಅಪ್ಸರೆಯರು ನರ್ತಿಸಿದರು, ನಾರದಾದಿ ದಿವ್ಯಋಷಿಗಳು ಜಯಜಯಕಾರ ಘೋಷಿಸಿದರು, ಸಜ್ಜನರ ಮನಸ್ಸು ತಣಿಯಿತು, ದುರ್ಜನರ ಹೃದಯ ತಲ್ಲಣಿಸಿತು.

ಉದಯಿಸಿದ ಮಗುವನ್ನು ಕೈಗೆತ್ತಿಕೊಂಡು ಮೋಹಿನಿಯು ಶಿವನನ್ನು ಕುರಿತು "ಪರಶಿವನೇ ! ಈ ವಿಗ್ರಹ ಮೂರು ಲೋಕವನ್ನೂ ಆಳಬಲ್ಲ ಶಕ್ತಿಯುಳ್ಳದ್ದು. ಇದು ಮಹಾಬಲಶಾಲಿ. ಈ ಮಗುವಿನಿಂದಲೇ ಲೋಕಕಂಟಕಿಯಾದ 'ಮಹಿಷಾಸುರಿ' ಯ ವಧೆಯಾಗಬೇಕು. ಕಲಿಯುಗದಲ್ಲಿ ಕಣ್ಣಂಡದೇವತೆಯಾಗಿ, ಭಕ್ತರ ಈಪ್ಸಿತಗಳನ್ನು ಕೊಟ್ಟು ಕಾಪಾಡುವ ದಿವ್ಯ ದೇವತೆಯಾಗಬೇಕು. ದುಷ್ಟಶಿಕ್ಷಣ ಹಾಗೂ ಶಿಷ್ಟರಕ್ಷಣೆ ಈ ಶಿಶುವಿನಿಂದಲೇ ನಡೆಯತಕ್ಕದ್ದು, ಇದಕ್ಕಾಗಿಯೇ ಈ ಮಗುವನ್ನು ಇಲ್ಲಿಯೇ ಬಿಟ್ಟು ಹೊರಡೋಣ" ಎಂದನು.

ಹೊರಡುವಂತು ಶ್ರೀಮನ್ನಾರಾಯಣನು ತನ್ನ ಕತ್ತಿನಲ್ಲಿದ್ದ ವಜ್ರಮಣಿಮಾಲೆಯನ್ನು ಆ ಮಗುವಿಗೆ ಧರಿಸಿದನು. ತನ್ನ ವೈಷ್ಣವೀಶಕ್ತಿ, ಶಿವಶಕ್ತಿ, ಸಮಸ್ತ ದೇವತೆಗಳ ಶಕ್ತಿ ಇವುಗಳನ್ನು ಆ ಶಿಶುವಿನಲ್ಲಿ ಆವಾಹಿಸಲಾಯಿತು. ಹರಿ-ಹರರು ತಮ್ಮ ತಮ್ಮ ಲೋಕವತ್ತ ತೆರಳಿದರು.

ಪಂದಳದೇಶದ ರಾಜ ಸಂತಾನವಿಲ್ಲದೇ ಶ್ರೀಮದ್ವಿಷ್ಣುನಿನ ವ್ರತವನ್ನು ಕೈಗೊಂಡು ಆತನನ್ನು ಮೆಚ್ಚಿಸಿದನು. ಜನ್ಮಾಂತರದಲ್ಲಿ ಆತನಿಗೆ ವೈವೀಶಕ್ತಿಯ ಪುತ್ರನನ್ನು ಕೊಡುವುದಾಗಿ ವಿಷ್ಣುವನ್ನಿತ್ತಿದ್ದ. ಆದೇ ರಾಜ ಈಗ ಮಂಡಲಾಧಿಪತಿಯಾಗಿ, ಪಂಪಾ ಪ್ರದೇಶವನ್ನು ವೈಭವದಿಂದ ಆಳುತ್ತಿದ್ದ. ಕಾಡುಮೃಗಗಳ ಬಾಧೆಯಿಂದ ನರಳುತ್ತಿದ್ದ ಪ್ರಜೆಗಳ ಸಂರಕ್ಷಣೆಗಾಗಿ ಬೇಟೆಗೆ ಬಂದ ಮಂಡಲಾಧಿಪತಿ ಇದ್ದಕ್ಕಿದ್ದಂತೆ ಶಿಶುವೊಂದರ ಆಳುವನ್ನು ಕೇಳಿ ಆದರ ಬಳಿಗೆ ಬಂದ.

"ಕುಲದೈವನಾದ ಶಿವನೇ, ಇದೇನು ವಿಚಿತ್ರ ! ಈ ಮಗು ಯಾರದ್ದಿರಬಹುದು ? ಇದನ್ನು ಸಂತಾನಸುಖವಿಲ್ಲದ ನಾನು ಒಯ್ಯುವುದು ಧರ್ಮವೋ ಅಧರ್ಮವೋ

 CC-O. In Public Domain. Digitized by eGangotri

ತಿಳಿಯದು. ಬಳಿಯಲ್ಲಿ ರಕ್ಷಕರಿಲ್ಲದ ಈ ಮಗುವನ್ನು ಹೀಗೆಯೇ ಬಿಟ್ಟುಹೊರಡುವುದು ಅನುಚಿತವಲ್ಲವೇ ? ಏನುಮಾಡಲಿ ? ಶಂಭೋ ! ಶಂಕರ ! ನೀನೇ ದಾರಿ ತೋರಬೇಕು" ಎಂದು ಬಹುವಾಗಿ ವ್ಯಥಿಸುತ್ತಾ ಅಲ್ಲಿಯೇ ಮೂರ್ಛೆಹೋದನು. ಆಗ ಶಿವನು ಸ್ವಯಂ ಜಟಾಧಾರಿಯಾದ ವದ್ಧ ಬ್ರಾಹ್ಮಣನ ವೇಷದಲ್ಲಿ ಮಂಡಲಾಧಿಪತಿಯ ಎದುರಿಗೆ ಬಂದು ಅವನನ್ನು ಎಚ್ಚರಿಸಿ, "ಅರಸನೇ, ನೀನು ವ್ಯಥೆಪಡಬೇಕಾದುದಿಲ್ಲ. ಸಂತಾನ ವಿಲ್ಲದ ನಿನಗೆ ಭಗವಂತನು ಕರುಣಿಸಿದ ಮಗು ಇದು. ಇದರ ಕಂಠದಲ್ಲಿ ಮಣಿಮಾಲೆ ಇರುವುದರಿಂದಲೂ, ಸ್ವಯಂ ವೀರನಾಗಿರುವುದರಿಂದಲೂ ವೀರಮಣಿಕಂಠ ಎಂಬ ನಾಮ ಕರಣವನ್ನು ಮಾಡಿ ಈ ಮಗುವನ್ನು ಸಾಕು. ಮುಂದೆ ನಿನಗೆ ಇನ್ನೊಂದು ಸಂತಾನವೂ ಆಗುವುದು. ನೀನು ಸರ್ವವಿಧವಾದ ಶ್ರೇಯಸ್ಸನ್ನು ಪಡೆಯುವೆ ಎಂದು ಆಶೀರ್ವದಿಸಿ" ಮರೆಯಾದನು.

ಅರಸನು ತನ್ನ ಭಾಗ್ಯವನ್ನು ಕೊಂಡಾಡುತ್ತಾ ಆ ಮಗುವನ್ನು ಅರಮನೆಗೆ ಕೊಂಡೊಯ್ದು, ಇದರ ರಕ್ಷಣೆ ಭಾರವನ್ನು ಪಟ್ಟದ ರಾಣಿಗೆ ವಹಿಸಿದನು. ದೈವಿ ಶಕ್ತಿಯ ಪ್ರಭಾವದಿಂದ ಅವಳು ಈ ಮಗುವನ್ನು ಸಾಕಲು ಸರ್ವಸಮರ್ಥಳಾದಳು. ಶುಭಮುಹೂರ್ತದಲ್ಲಿ 'ವೀರಮಣಿ ಕಂಠ' ಎಂಬ ನಾಮಕರಣ ಮಹೋತ್ಸವವೂ ನಡೆಯಿತು.

ಇದಾದ ಕೆಲವು ದಿನಸಗಳಲ್ಲಿ ಬ್ರಾಹ್ಮಣರೂಪದಲ್ಲಿ ಬಂದ ಶಿವನ ಆಶೀರ್ವಾದದಂತೆ ರಾಜನು ಇನ್ನೊಂದು ಸಂತಾನವನ್ನು ಪಡೆದನು. ಈ ಇಬ್ಬರು ರಾಜಕುಮಾರರೂ ಶುಕ್ಲಪಕ್ಷದ ಚಂದ್ರನಂತೆ ಬೆಳೆಯತೊಡಗಿದರು. ಐದುವರ್ಷ ವಯಸ್ಸಿನಲ್ಲಿ ವಿದ್ಯಾಭ್ಯಾಸ ಕ್ಕಾಗಿ ಯೋಗ್ಯವಾದ ಗುರುಗಳ ಬಳಿಯಲ್ಲಿ ಈ ಮಕ್ಕಳನ್ನು ಬಿಡಲಾಯಿತು. ಚತುರ್ವೇದ ಷಟ್‌ಶಾಸ್ತ್ರ ಚತುಷ್ಷಷ್ಟಿ ಕಲಾಪ್ರವೀಣನಾಗಿ ವೀರ ಮಣಿಕಂಠ ಚಿನ್ನಕ್ಕೆ ಪರಿಮಳ ಬಂದಂತೆ ಬೆಳಗಿದನು. ಮಕ್ಕಳಿಗೆ ವಿದ್ಯೆಯನ್ನು ಕಲಿಸಿದ ಗುರುಗಳಿಗೆ ಗುರುದಕ್ಷಿಣೆ ಯನ್ನು ಕೊಡುವ ವ್ಯವಸ್ಥೆಯಾಯಿತು. ಧನಕನಕ ವಸ್ತು ವಾಹನಾದಿಗಳನ್ನು ತೆಗೆದು ಕೊಂಡು ಹರಿಹರ ಪುತ್ರನು ಗುರುಗಳ ಪಾದಗಳ ಮೇಲೆ ಭಕ್ತಿಯಿಂದ ಅರ್ಪಿಸಿದನು. ಆದರೆ ಗುರುಗಳು ತನ್ನ ಶಿಷ್ಯನ ಪ್ರಭಾವವನ್ನು ಸಂಪೂರ್ಣವಾಗಿ ಅರಿತವರಾದುದರಿಂದ ಅದನ್ನು ತಿರಸ್ಕರಿಸಿ ತನ್ನ ಕಷ್ಟವನ್ನು ಪರಿಹರಿಸಬೇಕಾಗಿ ಕೇಳಿಕೊಂಡರು. ಆದರಂತೆ ದಡ್ಡನೂ ಮೂಕನೂ ಆಗಿದ್ದ ಗುರುಗಳ ಏಕಮಾತ್ರ ಪುತ್ರನನ್ನು ಜ್ಞಾನಿಯನ್ನಾಗಿಯೂ ವಾಗ್ಮಿಯನ್ನಾಗಿಯೂ ಮಾಡಿದನು. ಗುರುಗಳಿಗೆ ಇದರಿಂದಾದ ಸಂತೋಷ ಅಪಾರ. ಶಿಷ್ಯನ ಬೇಡಿಕೆಯಂತೆ ಈ ಪವಾಡವನ್ನು ಯಾರಿಗೂ ಅರಿಯದಂತೆ ಗುರುಗಳು ರಹಸ್ಯ ವಾಗಿಟ್ಟರು.

CC-O. In Public Domain. Digitized by eGangotri

ದಿನದಿನವೂ ಉತ್ತಮ ಗುಣಗಳಿಂದ ಪ್ರಜಾನುರಾಗಿಯಾಗಿ ಬೆಳೆಯುತ್ತಿದ್ದ ತನ್ನ ಮಗನಾದ ಮಣಿಕಂಠನಿಗೆ ಪಟ್ಟಾಭಿಷೇಕ ಮಾಡಿ ತಾನು ರಾಜ್ಯದ ಹೊರೆಯಿಂದ ದೂರ ವಾಗಬೇಕೆಂದು ಪಂದಳ ರಾಜನು ನಿಶ್ಚಯಿಸಿದನು. ಪ್ರಧಾನ ಮಂತ್ರಿಗೆ ಇದು ರುಚಿಸ ಲಿಲ್ಲ ತನ್ನ ಮಂತ್ರಿತ್ವಕ್ಕೆ, ಸರ್ವಾಧಿಕಾರಕ್ಕೆ, ಇದರಿಂದ ಧಕ್ಕೆಯೆಂದು ಭಾವಿಸಿ ವೀರಮಣಿಕಂಠನನ್ನು ಹೇಗಾದರೂ ದೂರಮಾಡಬೇಕೆಂದು ನಿಶ್ಚಯಿಸಿದನು. ಇದಕ್ಕಾಗಿ ಮಣಿಮಂತ್ರ, ಔಷಧಗಳ ಸಹಾಯವನ್ನು ಪಡೆದನು. ಮಂತ್ರವಾದಿಗಳೂ ವಿಫಲರಾದರು. ಮಂತ್ರಶಕ್ತಿ ಕುಗ್ಗಿತು, ವಿಷಪ್ರಯೋಗವೂ ವಿಷಕಂಠನ ಮಗನ ಮೇಲೆ ಏನೂ ಮಾಡ ಲಾರದೇ ಹೋಯಿತು.

ರಾಣಿಯ ಮೂಲಕ ಈ ಮಣಿಕಂಠನನ್ನು ಕೊಲ್ಲಿಸಲು ಭೀಮೋಪಾಯವೊಂದನ್ನು ಹಿಡಿದನು. "ಮಹಾರಾಣಿಯವರೇ! ಮಹಾರಾಜರು ನಿನ್ನ ಮಗನನ್ನು ಬಿಟ್ಟು ವೀರ ಮಣಿಕಂಠನಿಗೆ ಪಟ್ಟಕಟ್ಟಲು ನಿಶ್ಚಯಿಸಿದ್ದಾರೆ. ಇದರಿಂದ ನಿಮಗೆ ಅವಮಾನ ಮಾತ್ರ ವಲ್ಲದೆ ಭವಿಷ್ಯದಲ್ಲಿ ನೀವು ಬಹುವಿಧವಾದ ತೊಂದರೆಯನ್ನು ಅನುಭವಿಸಬೇಕಾಗಬಹುದು. ಆದುದರಿಂದ ಯಾವುದಾದರೊಂದು ಉಪಾಯವನ್ನು ಮಾಡಬೇಕು ಎಂದು ಸಲಹೆ ಯಿತ್ತನು. ಆಗ ರಾಣಿಯು ಮಂತ್ರಿಯನ್ನೇ ಶರಣುಹೋಗಲು ಅವನು ಹೀಗೆ ಹೇಳಿದನು : "ನೀವು ವಿಪರೀತವಾದ ತಲೆನೋವಿನಿಂದ ನರಳುತ್ತಿರುವುದಾಗಿಯೂ ಇದಕ್ಕೆ ಚಿಕಿತ್ಸೆ ಕಾಡಿನಲ್ಲಿರುವ ಹುಲಿಯ ಹಾಲಿನಿಂದ ಆಗಬೇಕೆಂದು ರಾಜವೈದ್ಯರು ತಿಳಿಸಿರು ವುದಾಗಿಯೂ ರಾಜನನ್ನು ಕಾಡಿಬೇಡಿರಿ. ಆಗ ಪಿತೃಭಕ್ತನಾದ ಮಣಿಕಂಠನು ತಂದೆಯ ಸಲುವಾಗಿ ಕಾಡಿಗೆ ಹೋಗುತ್ತಾನೆ. ಹುಲಿಗಳ ಬಾಯಿಗೆ ಬಿದ್ದು ಮೃತನಾಗುತ್ತಾನೆ."

ಈ ಭೇದೋಪಾಯವು ಸಫಲವಾಗಿ ವೀರ ಮಣಿಕಂಠನು ಹುಲಿಯ ಹಾಲನ್ನು ತರಲು ರಾಜಬೀದಿಯಲ್ಲಿ ಹೊರಟನು. ಊರಿನ ನಾಗರಿಕರು ತಮ್ಮ ಮಕ್ಕಳಿಗೆ ಆಡಲು ಹುಲಿಯ ಚಿಕ್ಕಮರಿಗಳ ಜೊತೆ ಬೇಕೆಂದೂ ಅವುಗಳನ್ನೂ ನೀನು ಕಾಡಿನಿಂದ ತಂದು ಕೊಡಬೇಕೆಂದೂ ಬೇಡಿದರು. ಪ್ರಜಾವತ್ಸಲನಾದ ರಾಜಕುಮಾರನು ಇದಕ್ಕೆ ಒಪ್ಪಿದನು. ಅರಣ್ಯವನ್ನು ಪ್ರವೇಶಿಸಿ ತನ್ನ ಕೈಯಲ್ಲಿದ್ದ ಭನ್ಯವಾದ ಶಂಖವನ್ನು ಒಮ್ಮೆ ಜೋರಾಗಿ ಊದಿದನು. ಶರಳ, ಶಾನಳನೂಡ, ಕುಟ್ಟಯ್ಯ, ಶಲ್ಲಸಿಳ್ಳೆ ಮೊದಲಾದ ಭೂತಗಣಗಳು ಈ ಶಂಖಧ್ವನಿಯನ್ನು ಕೇಳಿ ಅವನ ಬಳಿಗೆ ಬಂದು ನಮಸ್ಕರಿಸಿ, ಸೇವೆಗಾಗಿ ಬದ್ಧಕಂಕಣ ರಾಗಿ ನಿಂತವು.

ಆ ಭೂತಗಣಗಳನ್ನು ಕರೆಮಾಕೊಂಡು ವೀರ ಮಣಿಕಂಠನು ತನ್ನ ಅವತಾರ ಪ್ರಯೋಜನವಾದ ಕಾರ್ಯವನ್ನು ಮಾಡಬೇಕೆಂದು ನಿಶ್ಚಯಿಸಿ, ಅಲ್ಲಿಯೇ ಕಾಡಿನ ಒಂದು ಭಾಗದಲ್ಲಿದ್ದ ಮಹಿಷಿಯ ಬಳಿಗೆ ಬಂದನು. ಅವಳ ಮುಂದೆ ನಿಂತು ತನ್ನ ವೈಭವವನ್ನು ಆಕೆಗೆ ತಿಳಿಸಲು, ಒಮ್ಮೆ ಗಂಭೀರವಾಗಿ ಶಂಖನಾದ ಮಾಡಿದನು.

CC-O. In Public Domain. Digitized by eGangotri

ಇದನ್ನು ಕೇಳಿ ರೊಚ್ಚಿಗೆದ್ದ ಮಹಿಷೀ ವೀರಮಣಿಕಂಠನ ಮೇಲೆ ನುಗ್ಗಿದಳು. ಇಬ್ಬರಿಗೂ ಮೂರು ನಾಲ್ಕುದಿನಗಳ ಭಯಂಕರ ಯುದ್ಧವಾಯಿತು. ಮಹಿಷಿಯ ಶಕ್ತಿಯು ಕುಗ್ಗುತ್ತಾ ಬಂದಿತು. ತನ್ನನ್ನು ಈ ರೀತಿಯಾಗಿ ಶಕ್ತಿ ಕುಗ್ಗುವಂತೆ ಮಾಡಿದವನು ಹರಿಹರ ಪುತ್ರನೇ ಇರಬೇಕೆಂಬ ಭಾವನೆಯು ಅವಳಲ್ಲಿ ಮೂಡಿಬಂದಿತು. ಒಡನೆಯೇ ಮಾಯಾರೂಪದಿಂದ ಮಣಿಕಂಠರನ್ನು ಆಕಾಶಕ್ಕೆ ಎತ್ತಿಕೊಂಡು ಹಾರಿ, ಭೂಮಿಗೆ ಅಪ್ಪಳಿಸಿ ಕೊಲ್ಲಲು ಸನ್ನಾಹಮಾಡಿದಳು. ಸರ್ವಶಕ್ತನಾದ, ರಾಕ್ಷಸಿಯ ಸಂಹಾರಕ್ಕಾಗಿ ಅವತರಿಸಿದ ಹರಿಹರ ಪುತ್ರನಾದ ವೀರಮಣಿಕಂಠಹಾರನು ವಿರಾಡ್‌ರೂಪವನ್ನು ತಳೆದು ಅವಳನ್ನು ಹಿಡಿದು ನೆಲಕ್ಕೆ ಅಪ್ಪಳಿಸಿ, ಅವಳ ದೇಹದ ಮೇಲೆ ಭಯಂಕರವಾಗಿ ನರ್ತನ ಮಾಡಲು ಆರಂಭಿಸಿದನು ರಾಕ್ಷಸಿಯ ಸ್ಥಿತಿಯು ಚಿಂತಾಜನಕವಾಯಿತು. ಆಗ ಅವಳಿಗೆ ಪೂರ್ವಜನ್ಮದ ಸ್ಮರಣೆ ಉಂಟಾಗಿ, ವೀರಮಣಿಕಂಠನನ್ನು ತನ್ನ ತಪ್ಪಿಗಾಗಿ ಕ್ಷಮೆಬೇಡಿದಳು. ಕರುಣಾಳುವಾದ ಆತನು ಅವಳನ್ನು ಕ್ಷಮಿಸಿ ಮೋಕ್ಷವನ್ನು ಕರುಣಿಸಿದನು. ಈ ಮಹಾ ಸಂಭ್ರಮವನ್ನು ನೋಡಲು ನೆರೆದಿದ್ದ ದೇವತೆಗಳು ಹರಿಹರ ಪುತ್ರನನ್ನು ತಮ್ಮ ಲೋಕಕ್ಕೆ ಆಹ್ವಾನಿಸಿದರು. ಆಗ ವೈಕುಂಠವಾಸಿಯಾದ ಶ್ರೀಮನ್ ನಾರಾಯಣನು ಮಹಿಷಿಯ ಮರ್ದನ ಮಾತ್ರಕ್ಕಾಗಿ ಇವನು ಅವತರಿಸಿದವನಲ್ಲವೆಂದು ಈತನಿಂದ ಕಲಿಯುಗದ ಭಕ್ತರ ಸಂರಕ್ಷಣೆಯಾಗಬೇಕಾಗಿದೆಯೆಂದೂ ವಿವರಿಸಿ ಅವರಿಗೆ ಸಮಾಧಾನ ಮಾಡಿದನು.

ಹುಲಿಯಾಗಿ ಎಲ್ಲ ದೇವತೆಗಳೂ ಮಾರ್ಪಟ್ಟರು. ವ್ಯಾಘ್ರರೂಪಿಯಾದ ಇಂದ್ರನ ಮೇಲೇರಿ ರಾಜಧಾನಿಗೆ ಹಿಂದಿರುಗಿ ಅರಮನೆಯ ಬಾಗಿಲಲ್ಲಿ ಬಂದು ನಿಂತನು. ಮಹಾರಾಜನಿಗೆ ಈ ದೃಶ್ಯವನ್ನು ಕಂಡಾಗ ತಲೆತಿರುಗಿಹೋಯಿತು. ತನ್ನ ಇಚ್ಛೆಯು ಈಡೇರದ ಮಹಾರಾಣಿಯು ತನ್ನ ವೇದನೆಯು ಹಿಂದಿನ ದಿನವೇ ಮಾಯವಾಯಿತೆಂದು ಹೇಳಿ ತಪ್ಪಿಸಿಕೊಂಡಳು. ರಾಜನ ಮತ್ತು ಪ್ರಜೆಗಳ ಪ್ರಾರ್ಥನೆಯಂತೆ ತನ್ನೊಡನೆ ಬಂದ ಹುಲಿಗಳನ್ನು ಕಾಡಿಗೆ ಕಳುಹಿಸಿಕೊಟ್ಟನು.

ಹೀಗಿರುವಾಗ ಒಮ್ಮೆ ಅಗಸ್ತ್ಯಮಹರ್ಷಿಗಳು ಮಂಡಲಾಧಿಪತಿಯ ಆರಮನೆಗೆ ಬಂದರು. ಋಷಿಶ್ರೇಷ್ಠರಾದ ಅವರಿಗೆ ವೀರಮಣಿಕಂಠನು ನಮಸ್ಕರಿಸಿದನು. ಅವರಿಂದ ವಿನಯವಾಗಿ ತನ್ನ ನೈಜಸಂಗತಿಯನ್ನು ತಿಳಿಯಿರಿ ಎಂದು ತಂದೆಗೆ ಹೇಳಿ ಇಂದಿನಿಂದ ಎಂಟನೆಯ ದಿನ ರಾಜನು ಬ್ರಹ್ಮಸಾಯುಜ್ಯವನ್ನು ಪಡೆಯುವನೆಂದೂ, ತನಗೆ ಶಬರಿ ಮಲೈಯಲ್ಲಿ ದೇವಸ್ಥಾನವನ್ನು ಕಟ್ಟಿಸಬೇಕೆಂದೂ ತಿಳಿಸಿ, ತನ್ನ ಕೈಯಲ್ಲಿದ್ದ ಖಡ್ಗ ವೊಂದನ್ನು ರಾಜನ ರಕ್ಷಣೆಗಾಗಿ ಕೊಟ್ಟು ಅಂತರ್ಧಾನನಾದನು. ಅಗಸ್ತ್ಯಮಹರ್ಷಿ ಗಳಿಂದ ರಾಜನು ವಿಷಯವೆಲ್ಲವನ್ನೂ ವಿವರವಾಗಿ ಕೇಳಿ ಸಂತೋಷಪಟ್ಟನು.

CC-O. In Public Domain. Digitized by eGangotri

ಅಗಸ್ತ್ಯಮಹರ್ಷಿಗಳ ನೇತೃತ್ವದಲ್ಲಿ ದೇವಸ್ಥಾನವನ್ನು ಕಟ್ಟಲು ವ್ಯವಸ್ಥೆಯಾಯಿತು. ಹದಿನೆಂಟು ಮೆಟ್ಟಿಲುಗಳನ್ನು ಕಟ್ಟಿಸುವಂತೆ ಅಗಸ್ತ್ಯರು ಆಜ್ಞಾಪಿಸಿದರು. ರಾಜರು ಈ ಹದಿನೆಂಟು ಸಂಖ್ಯೆಯ ಅರ್ಥವೇನು ? ಎಂದು ಕೇಳಿದಾಗ "ಇಂದ್ರಿಯಗಳಿಗೆ ಐದು, ಕಾಮಕ್ರೋಧಾದಿಗಳಿಗೆ ಎಂಟು, ಸತ್ವಾದಿಗುಣಗಳಿಗೆ ಮೂರು, ವಿದ್ಯಾಜ್ಞಾನ ಇವುಗಳಿಗೆರಡು. ಇಂದ್ರಿಯಗಳನ್ನು ನಿಗ್ರಹಿಸಿ, ಕಾಮಾದಿಗಳನ್ನು ದೂರಮಾಡಿ ತ್ರಿಗುಣಾತೀತನಾಗಿ ವಿದ್ಯೆಯಿಂದ ಜ್ಞಾನಿಯಾಗಿ ಭಗವತ್‌ಸನ್ನಿಧಿಗೆ ಸೇರಬೇಕೆಂಬುದೇ ಇದರ ಅಭಿಪ್ರಾಯ" ಎಂದರು. ಪರಶುರಾಮರು ಈ ದೇವರ ಪ್ರತಿಷ್ಠೆಯ ಹೊಣೆಯನ್ನು ಹೊರುವರೆಂದು ಹೇಳಿ ಅಗಸ್ತ್ಯರು ಆ ರಾಜನ ಬಳಿಯಿಂದ ಬೀಳ್ಕೊಡುಗೆಯನ್ನು ಪಡೆದು ಹೊರಟರು.

ಮಹಾರಾಜನು ಶಿಲ್ಪಿಗಳನ್ನು ಕರೆಯಿಸಿಕೊಂಡು ದೇವಸ್ಥಾನವನ್ನು ನಿರ್ಮಾಣ ಮಾಡಲು ಶಬರಿಮಲೈ ಪ್ರದೇಶಕ್ಕೆ ಬಂದನು. ಆದರೆ ಅಲ್ಲಿ ಯಾವ ಸ್ಥಳದಲ್ಲಿ ದೇಗುಲವನ್ನು ಕಟ್ಟಬೇಕೆಂದು ತೋಚದಿರುವಾಗ ಮಣಿಕಂಠರನ್ನು ಪ್ರಾರ್ಥಿಸಲಾರಂಭಿಸಿದನು. ಆಗ ಮಣಿಕಂಠನು ಅಶರೀರವಾಣಿಯಿಂದ "ನಿರ್ದಿಷ್ಟವಾದ ಜಾಗದಲ್ಲಿ ಅಸ್ತ್ರವೊಂದು ಬೀಳುವುದೆಂದೂ, ಆ ಸ್ಥಳವನ್ನು ಸೂಕ್ತವೆಂದು ಭಾವಿಸಬಹುದೆಂದೂ" ಅಭಯದಾನ ಮಾಡಿದನು. ಸೂಚಿತವಾದ ಜಾಗದಲ್ಲಿ ಶುಭಮುಹೂರ್ತದಲ್ಲಿ ದೇವಸ್ಥಾನವನ್ನು ಸೃಷ್ಟಿಸಲು ರಾಜಾಜ್ಞೆಯಂತೆ ಶಿಲ್ಪಿಗಳು ಆರಂಭಿಸಿದರು.

ಇತ್ತ ಈ ಕಾರ್ಯ ಮುಗಿದು ರಾಜನು ಬ್ರಹ್ಮಸಾಯುಜ್ಯವನ್ನು ಪಡೆದರೆ ತನ್ನ ಸ್ಥಾನಕ್ಕೆ ಚ್ಯುತಿಬರಬಹುದೆಂಬ ಭಯವು ದೇವೇಂದ್ರನಿಗೆ ಉಂಟಾಯಿತು. ಒಡನೆಯೇ ಬೇಡನ ವೇಷವನ್ನು ಧರಿಸಿ, ರಾಜನನ್ನು ಎದುರಿಸಲು ಬಂದನು. ಭಯಂಕರವಾದ ಯುದ್ಧವಾಯಿತು. ವಜ್ರಾಯುಧದ ಹೊಡೆತಕ್ಕೆ ಸಿಕ್ಕಿ ಮೂರ್ಛೆಹೋದ ರಾಜ ಎಚ್ಚೆತ್ತು ವೀರಮಣಿಕಂಠನನ್ನು ನೆನೆಯುತ್ತಾ, ಆತನನ್ನೇ ಸ್ತುತಿಸುತ್ತಾ ಆತನ ಅನುಗ್ರಹದಿಂದ ಬಂದ ಖಡ್ಗವನ್ನು ಇಂದ್ರನ ಮೇಲೆ ಪ್ರಯೋಗಿಸಿದನು. ಆ ಖಡ್ಗವಾದರೋ ಇಂದ್ರನನ್ನು ಹಿಮ್ಮೆಟ್ಟಿತು. ಎಲ್ಲಿಯೂ ರಕ್ಷಣೆ ಸಿಗಲಿಲ್ಲ. ಆಗ ಸಹಸ್ರಾಕ್ಷನು "ಶಾಸ್ತಾ" ಎಂಬ ಬಿರುದನ್ನು ಪಡೆದ ವೀರಮಣಿಕಂಠನೇ ತನ್ನ ರಕ್ಷಕನೆಂದು ಭಾವಿಸಿ, ಅವನನ್ನೇ ಅನನ್ಯ ಶರಣನಾಗಿ ಪ್ರಾರ್ಥಿಸಿದನು. ಭೂತನಾಥನು ಪ್ರತ್ಯಕ್ಷನಾಗಿ ರಾಜನನ್ನೇ ಮೊರೆ ಹೋಗಬೇಕೆಂದೂ ಆಜ್ಞೆಯಿತ್ತನು. ಒಡನೆ ರಾಜನ ಬಳಿಗೆ ಬಂದು ಕ್ಷಮೆ ಬೇಡಿ ಆ ಆಯುಧವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಪ್ರಾರ್ಥಿಸಿದನು. ರಾಜನು ಆತನಿಗೆ ರಕ್ಷೆಯನ್ನಿತ್ತ ನಂತರ ಅಯ್ಯಪ್ಪದೇವರನ್ನು ಕೊಂಡಾಡುತ್ತಾ ಆತನ ದೇಗುಲದ ರಚನೆಗೆ ದೇವಲೋಕದ ಶಿಲ್ಪಿಯಾದ ವಿಶ್ವಕರ್ಮನ ನೆರವನ್ನು ಕೊಟ್ಟನು.

 CC-O. In Public Domain. Digitized by eGangotri

ಆರುದಿವಸಗಳಲ್ಲಿ ಭವ್ಯವಾದ ದೇಗುಲವು ನಿರ್ಮಾಣವಾಯಿತು. ಏಳನೆಯ ದಿನವೇ ಪವಿತ್ರವಾದ ಸಂಕ್ರಮಣ, ಸೂರ್ಯನು ತನ್ನ ಗಮನವನ್ನು ಉತ್ತರ ದಿಕ್ಕಿಗೆ ಬದಲಾಯಿಸುವ ಪುಣ್ಯತಮದಿನ. ಅಂದೇ ಉತ್ತರಾಯಣ ಆರಂಭ, ಪವಿತ್ರ ಶನಿವಾರ. ಅಂದಿನಮಾನಲಗ್ನದಲ್ಲಿ ದೇವತಾಪ್ರತಿಷ್ಠೆ ಕುಂಭಾಭಿಷೇಕ ಈ ಪವಿತ್ರ ಕಾರ್ಯಗಳನ್ನು ಮಾಡಲು ತಕ್ಕವ್ಯವಸ್ಥೆ ಆಯಿತು. ರಾಜ್ಯದ ಭಕ್ತ ಪ್ರಜೆಗಳೆಲ್ಲರೂ ಈ ವೈಭವವನು ಕಣ್ಣಾರೆ ಕಾಣಲು ನೆರೆದರು. ವಾದ್ಯಗಳನ್ನು ಮಧುರಧ್ವನಿ, ವೇದಗಳ ಘೋಷಗಳು ಮೊಳಗುತ್ತಿವೆ. ಈ ನೇಳೆಯುಲ್ಲಿ ಕೋಟಿಸೂರ್ಯ ಪ್ರಕಾಶರಾದ ಜಟಾಮುಂಕಟಧಾರಿಗಳಾದ ಪರುಶರಾಮರು ಕಮುಂಡಲು ಹಸ್ತಕರಾಗಿ ಅಲ್ಲಿಗೆ ಆಗಮಿಸಿದರು. ವೈಭವದಿಂದ ಅವರ ಅಮೃತ ಹಸ್ತದಿಂದ ದೇವತಾ ಪ್ರತಿಷ್ಠೆಯ ಕಾರ್ಯವೂ ನೆರವೇರಿತು.

ಹನ್ನೆರಡು ವರ್ಷಗಳು ಸತತವಾಗಿ ಹರಿಹರಪುತ್ರನ ದರ್ಶನ ಭ್ಯಾಗವನ್ನು ನಿಕಟಬಂಧುತ್ವವನ್ನೂ ಪಡೆದ ಮುಂಡಲಾಧಿಪತಿಯು ಬ್ರಹ್ಮ ಸಾಯುಜ್ಯವನ್ನು ಪಡೆದನು.

ಈ ಶಬರಿಮಲೈ ಅಧಿಪತಿಯನ್ನು ಮನೋವಾಕ್ಕಾಯ ಕರ್ಮಶುದ್ಧರಾಗಿ ಆರಾಧಿಸುವರು ಇಹಪರ ಸೌಖ್ಯ ಸಂಪತ್ತುಗಳನ್ನು ಪಡೆಯುವರು. ಮುಂಡಲದ ಅವಧಿಯ ದೀಕ್ಷೆಯನ್ನು ಹೊತ್ತು ಅಯ್ಯಪ್ಪನ ಶರಣವನ್ನು ಪಡೆಯುವ ಜನಗಳ ಭಾಗ್ಯ ಅತಿಶಯವಾದದ್ದು, ಅವರ ಇಷ್ಟಾರ್ಥಗಳೆಲ್ಲವೂ ಈಡೇರುವುದರಲ್ಲಿ ಸಂಶಯವಿಲ್ಲ. ಅಗಸ್ತ್ಯರು ವೀರಮಣಿಕಂಠನ ನಿಜವಾದ ಪರಿಚಯವನ್ನು ಪಂದಳ ರಾಜನಿಗೆ ಮಾಡಿಕೊಟ್ಟು ನಿಮಿತ್ತ ಈ ಚರಿತ್ರೆಗೆ ಅಗಸ್ತ್ಯಗೀತೆ ಎಂದು ಹೆಸರಾಯಿತು. ಇದರ ಪಠನ ಶ್ರವಣ ಸಕಲ ವಿಧ ಸುಖಕಾರಿ.

ಕಲಿಯುಗ ವರದನೇ ಶರಣಂ ಅಯ್ಯಪ್ಪ.

———

CC-O. In Public Domain. Digitized by eGangotri

ಶ್ರೀ

ಧರ್ಮಶಾಸ್ತಾ ಅಷ್ಟೋತ್ತರ ಶತನಾಮಾವಳಿ

ಪ್ರತಿ ನಾಮದ ಮೊದಲು 'ಓಂ' ಎಂಬುದಾಗಿಯೂ ನಾಮದ ಕೊನೆಯಲ್ಲಿ 'ನಮಃ' ಎಂದೂ ಸೇರಿಸಿಕೊಳ್ಳಬೇಕು.

ಮಹಾಶಾಸ್ತ್ರೇ
ಮಹಾದೇವಾಯ
ಮಹಾದೇವ ಸುತಾಯ
ಅವ್ಯಯಾಯ
ಲೋಕಕರ್ತ್ರೇ
ಲೋಕಭರ್ತ್ರೇ
ಲೋಕಹರ್ತ್ರೇ
ಪರಾತ್ಪರಾಯ
ತ್ರಿಲೋಕ ರಕ್ಷಕಾಯ
ಧನ್ವಿನೇ ॥೧೦॥
ತಪಸ್ವಿನೇ
ಭೂತಸೈನಿಕಾಯ
ಮಂತ್ರವೇದಿನೇ
ಮಹಾವೇದಿನೇ
ಮಾರುತಾಯ
ಜಗದೀಶ್ವರಾಯ
ಲೋಕಾಧ್ಯಕ್ಷಾಯ
ಅಗ್ರಣ್ಯೇ
ಶ್ರೀಮತೇ
ಅಪ್ರಮೇಯ ಪರಾಕ್ರಮಾಯ ॥೨೦॥
ಸಿಂಹಾರೂಢಾಯ
ಗಜಾರೂಢಾಯ
ಹಯಾರೂಢಾಯ
ಮಹೇಶ್ವರಾಯ
ನಾನಾಶಸ್ತ್ರಧರಾಯ

ಅನರ್ಘಾಯ
ನಾನಾವಿದ್ಯಾವಿಶಾರದಾಯ
ನಾನಾರೂಪಧರಾಯ
ವೀರಾಯ
ನಾನಾಪ್ರಾಣಿನಿಷೇವಕಾಯ ॥೩೦॥
ಪೂಜೇಶಾಯ
ಭೂತಿದಾಯ
ಭೃತ್ಯಾಯ
ಭುಜಂಗಾಭರಣೋತ್ಸವಾಯ
ಇಷುಧನ್ವಿನೇ
ಪುಷ್ಪಬಾಣಾಯ
ಮಹಾರೂಪಾಯ
ಮಹಾಪ್ರಭವೇ
ಮಾಯಾದೇವಿಸುತಾಯ
ಮಾನ್ಯಾಯ ॥೪೦॥
ಮಹಾಗುಣಾಯ
ಮಹಾಸೀತಯೇ
ಮಹಾರುದ್ರಾಯ
ವೈಷ್ಣವಾಯ
ವಿಷ್ಣುಪೂಜಕಾಯ
ವಿಷ್ಣ್ವೀಶಾಯ
ವೀರಭದ್ರೇಶಾಯ
ಭೈರವಾಯ
ಷಣ್ಮುಖಧ್ರುವಾಯ
ಮೇರುಶೃಂಗಸಮಾಸೀನಾಯ ॥೫೦॥

 CC-O. In Public Domain. Digitized by eGangotri

ಮುನಿಸಂಘನಿಷೇವಿತಾಯ
ದೇವಾಯ
ಭದ್ರಾಯ
ಜಗನ್ನಾಥಾಯ
ಗಣನಾಥಾಯ
ಘನೇಶ್ವರಾಯ
ಮಹಾಯೋಗಿನೇ
ಮಹಾಮಾಯಿನೇ
ಮಹಾಜ್ಞಾನಿನೇ
ಮಹಾಸ್ಥಿರಾಯ ॥೬೦॥
ದೇವಶಾಸ್ತ್ರೇ
ಭೂತಶಾಸ್ತ್ರೇ
ಭೀಮಹಾಸ ಪರಾಕ್ರಮಾಯ
ನಾಕಹರಾಯ
ನಾಕಕೇಶಾಯ
ವ್ಯೋಮಕೇಶಾಯ
ಸನಾತನಾಯ
ಸುಗುಣಾಯ
ನಿರ್ಗುಣಾಯ
ನಿತ್ಯಾಯ ॥೭೦॥
ನಿತ್ಯತೃಪ್ತಾಯ
ನಿರಾಶ್ರಯಾಯ
ಲೋಕಾಶ್ರಯಾಯ
ಗಣಾಧೀಶಾಯ
ಚತುಃಷಷ್ಟಿಕಲಾಮಯಾಯ
ಋಗ್ಯಜುಃಸಾಮಥರ್ವಣರೂಪಿಣೇ
ಮಲ್ಲಕಾಸುರ ಭಂಜನಾಯ
ತ್ರಿಮೂರ್ತಯೇ
ದೈತ್ಯಮಥನಾಯ
ಪ್ರಕೃತಯೇ ॥೮೦॥
ಪುರುಷೋತ್ತಮಾಯ
ಕಾಲಜ್ಞಾನಿನೇ
ಮಹಾಜ್ಞಾನಿನೇ
ಕಾಮದಾಯ
ಕಮಲೇಕ್ಷಣಾಯ
ಕಲ್ಪವೃಕ್ಷಾಯ
ಮಹಾವೃಕ್ಷಾಯ
ವಿದ್ಯಾವೃಕ್ಷಾಯ
ವಿಭೂತಿದಾಯ
ಸಂಸಾರತಾಪವಿಚ್ಛೇತ್ರೇ ॥೯೦॥
ಪಶುಲೋಕ ಭಯಂಕರಾಯ
ರೋಗಹಂತ್ರೇ
ಪ್ರಾಣದಾತ್ರೇ
ಪರಗರ್ವವಿಭಂಜನಾಯ
ಸರ್ವಶಾಸ್ತ್ರಾರ್ಥ ತತ್ವಜ್ಞಾಯ
ನೀತಿಮತೇ
ಪಾಪಭಂಜನಾಯ
ಪುಷ್ಕಲಾಪೂರ್ಣಾಯ
ಯಮ್ಯುಕ್ತಾಯ
ಪರಮಾತ್ಮನೇ ॥೧೦೦॥
ಸತಾಂಗತಯೇ
ಆನಂತಾದಿತ್ಯಸಂಕಾಶಾಯ
ಸುಬ್ರಹ್ಮಣ್ಯಾಯ
ಬಲಿನೇ
ಭಕ್ತಾನುಕಂಪಿನೇ
ದೇವೇಶಾಯ
ಭಗವತೇ
ಭಕ್ತವತ್ಸಲಾಯ ॥೧೦೮॥

॥ ಇತಿ ಧರ್ಮಶಾಸ್ತಾ ಅಷ್ಟೋತ್ತರ ಶತನಾಮಾವಳಿಃ ಸಂಪೂರ್ಣಂ ॥

CC-O. In Public Domain. Digitized by eGangotri

ಧ್ಯಾನಮ್

ಲೋಕವೀರಂ ಮಹಾಪೂಜ್ಯಂ ಸರ್ವರಕ್ಷಾಕರಂ ವಿಭುಮ್ ।
ಪಾರ್ವತೀ ಹೃದಯಾನಂದಂ ಶಾಸ್ತಾರಂ ಪ್ರಣಮಾಮ್ಯಹಮ್ ॥೧॥

ವಿಪ್ರಪೂಜ್ಯಂ ವಿಶ್ವವಂದ್ಯಂ ವಿಷ್ಣುಶಂಭೋಃ ಪ್ರಿಯಂಸುತಮ್ ।
ಕ್ಷಿಪ್ರಪ್ರಸಾದ ನಿರತಂ ಶಾಸ್ತಾರಂ ಪ್ರಣಮಾಮ್ಯಹಮ್ ॥೨॥

ಯಸ್ಯ ಧನ್ವಂತರೀಮಾತಾ ಪಿತಾರುದ್ರೋ ಭಿಷತ್ತಮಃ ।
ತಂ ಶಾಸ್ತಾರಂ ಅಹಂ ವಂದೇ ಮಹಾವೈದ್ಯಂ ದಯಾನಿಧಿಮ್ ॥೩॥

ಭೂತನಾಥ ಸದಾನಂದ ಸರ್ವಭೂತದಯಾಪರ ।
ರಕ್ಷ ರಕ್ಷ ಮಹಾಬಾಹೋ ಶಾಸ್ತ್ರೇತುಭ್ಯಂ ನಮೋನಮಃ ॥೪॥

ಮತ್ತಮಾತಂಗಗಮನಂ ಕಾರುಣ್ಯಾಮೃತಪೂರಿತಂ ।
ಸರ್ವ ವಿಘ್ನಹರಂ ದೇವಂ ಶಾಸ್ತಾರಂ ಪ್ರಣಮಾಮ್ಯಹಮ್ ॥೫॥

ಅಸ್ಮತ್ಕುಲೇಶ್ವರಂ ದೇವಂ ಅಸ್ಮಚ್ಛತ್ರು ವಿನಾಶನಂ ।
ಅಸ್ಮದಿಷ್ಟಪ್ರದಾತಾರಂ ಶಾಸ್ತಾರಂ ಪ್ರಣಮಾಮ್ಯಹಮ್ ॥೬॥

ಪಾಂಡ್ಯೇರವಂಶತಿಲಕಂ ಕೇರಳೇ ಕೇಲಿವಿಗ್ರಹಂ ।
ಆರ್ತತ್ರಾಣಪರಂ ದೇವಂ ಶಾಸ್ತಾರಂ ಪ್ರಮಾಣಮ್ಯಹಮ್ ॥೭॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಮೋ ನಮಃ

ಪ್ರತಿ ನಾಮದ ಕೊನೆಯಲ್ಲಿ "ನಮೋ ನಮಃ" ಎಂದು ಸೇರಿಸಿಕೊಳ್ಳಬೇಕು.

ಆರ್ಯವಂಶ ಸುಜಾತಾಽ
ವೀರ್ಯ ದಿವ್ಯ ವಿಲಾಸಽ
ಶಾಶ್ವತ ಸಿದ್ಧದೇವಽ
ಭೂತವಂದಿತದೇವಽ
ಭೀತಿನಾಶನರೂಪಽ
ಮೋಹನಾಂಬುಜಪಾದಽ
ರಾಜಸೇವಕ ವೀರಽ
ವಾಸವಾಶ್ರಿತದೇವಽ
ಕಾಂತಶೃಂಗೆ ನಿವಾಸಽ
ಶಾಂತಿದಾಯಕದೇವಽ
ದೇವವಂದ್ಯಗಿರೀಶಽ
ಮೂಲಮಂತ್ರಸ್ವರೂಪಽ

ವಾಜಿವಾರಣ ವಾಹಽ
ಗೀತನೃತ್ಯ ವಿನೋದಽ
ಘೋರಪಾಪವಿನಾಶಽ
ಹಾರನೂಪುರ ಧೀರಽ
ಜ್ಯೋತಿಷಾಂಚಿತ ಪೀಠಽ
ಧ್ಯಾನಮಾಗಳರೂಪಽ
ಕಾನನಾಂತರ ವಾಸಽ
ಬಾಲವಿಗ್ರಹ ಮೂಲಽ
ಪುತ್ರದಾಯಕ ದೇವಽ
ಈಶಕೇಶವ ಸೂನೋಽ
ಪಾರಜನ್ಮವಿನಾಶಽ
ಆರ್ತಿನಾಶನಕೀರ್ತೇ

———

CC-O. In Public Domain. Digitized by eGangotri

ಪಾಹಿಮಾಮ್

ಸರ್ವಭೂತನಾಯಕ । ಸಮಸ್ತಲೋಕನಾಯಕ ।
ಸರ್ವದುಃಖನಾಶನ । ಸಮಸ್ತಪಾಪನಾಶನ ।
ವಂದಿತಾಂಘ್ರಿಪುಂಡರೀಕ ಪೂರ್ಣರೂಪ ಪಾಹಿಮಾಂ ।
ಪಾಂಡ್ಯಪುತ್ರ ಪೂರ್ವಪುಣ್ಯ ಮೋಹನಾಕೃತೇ ।
ಪೂರ್ಣಪುಷ್ಕಲಾ ಸಮೇತ ಪೂರ್ಣರೂಪ ಪಾಹಿಮಾಂ ।
ಪೂರ್ಣಚಂದ್ರತುಂಡ । ವೇತ್ರದಂಡ । ವೀರ್ಯವಾರಿಧೇ ।
ಸುಪ್ರಸನ್ನ । ದೇವ ವೇವ । ಸದ್ಗತಿಪ್ರದಾಯಕ ।
ಚಿತ್ಪ್ರಕಾಶ । ಧರ್ಮಪಾಲ । ಸರ್ವದೇವತಾತ್ಮಕ ।
ಆದಿಶಂಕರಾಚ್ಯುತಪ್ರಿಯಾತ್ಮಸಂಭವ । ಪ್ರಭೋ ।
ಭೂತಿಭೂಷ । ವೇದಘೋಷ । ಭೂತಸೇವ್ಯ ಪಾಹಿಮಾಂ ।
ಸುಪ್ರಸಿದ್ಧಪಂಚಶೈಲ ಸನ್ನಿಕೇತ ನರ್ತಕ ।
ಸುಪ್ರಭಪ್ರಕಲ್ಪ ಚಿತ್ಪ್ರಕಾಶ । ದಿವ್ಯದೇಶಿಕ ।
ಆದಿಭೂತನಾಥ ವಿನೋದರೂಪ ಪಾಹಿಮಾಂ ।
ಜ್ಯೋತಿರೂಪ । ನೀರತಾಪ । ಯೋಗರೂಪ । ಪಾಹಿಮಾಂ ।
ರಾಜಮಾನವಕ್ತ್ರ । ಭಕ್ತಮಿತ್ರ । ಶತ್ರುನಾಶನ ।
ವಾಜಿವಾಹನವಿಭೋ । ವಿಶಾಲನೇತ್ರ । ಪಾಹಿಮಾಂ ।
ಭೂತನಾಥ ಪಾಹಿಮಾಂ ಸಮಸ್ತನಾಥ ಪಾಹಿಮಾಂ ।
ವೇದ ವೇದ್ಯ ಪಾಹಿಮಾಂ ವಿರಂಚಿನಂದ್ಯ ಪಾಹಿಮಾಂ ।

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರಕೃಪಾ ಗ್ರಂಥನಮಾಲೆಯ ಪ್ರಕಟಣೆಗಳು

1. ಶೃಂಗೇರಿಯ ಪುನರ್ದರ್ಶನ .... ರೂ. 1 - 50
2. ಉಪನಿಷತ್ತಿನ ಸಾರ ... . ಅಚ್ಚಿನಲ್ಲಿದೆ
3. ಶಾಂಕರದರ್ಶನ ... . ರೂ. 2 - 00
4. ಸಂಧ್ಯಾವಂದನೆಯ ತತ್ತ್ವಾರ್ಥ .... ರೂ. 2 - 50
5. ಶ್ರೀಶಾರದಾಸುಪ್ರಭಾತಸ್ತೋತ್ರಮ್ .... ರೂ. 0 - 50
6. ಸ್ತೋತ್ರ ಪುಷ್ಪಾವಳಿ (ಭಾಗ ೧) ... ರೂ. 0 - 25

ಶ್ರೀ ಶಂಕರಕೃಪಾ : ಧಾರ್ಮಿಕ ವಿಚಾರಗಳಿಗೆ ಮೀಸಲಾಗಿರುವ ಮಾಸಪತ್ರಿಕೆ

ಚಂದಾ : ಮಹಾಪೋಷಕರು ರೂ. 1000 ಪೋಷಕರು ರೂ. 500
ಆಜೀವ ಸದಸ್ಯರು ರೂ. 250 ವಾರ್ಷಿಕ ಚಂದಾ ರೂ. 10

Shree Sharada Mudrana Prakashanalaya, (P.) Ltd. Mysore-4. 2-1-1975

Sri Vidyabharathi Book Centre, Sringeri